**ಮೂ.ದಾ.ನಂ.** 94/2019

ಪಿ.ಡಬ್ಲ್ಯು.1

(ಇಂದು ದಿನಾಂಕ: 15-**07-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ಶ್ರೀ. ಬಿ ಡಿ ಎಸ್ ವಕೀಲರಿಂದಃ**

ನನ್ನ ತಾಯಿಯು ಯಾವ ದಿನಾಂಕ ಹಾಗೂ ಯಾವ ತಿಂಗಳಿನಲ್ಲಿ ಮದುವೆಯಾಗಿದೆ ಎಂಬ ಬಗ್ಗೆ ನನಗೆ ತಿಳಿದಿಲ್ಲಾ ನನ್ನ ತಾಯಿಯು 1949 ರಲ್ಲಿ ಮದುವೆಯಾಗಿರುತ್ತಾರೆ. ನನ್ನ ತಾಯಿಗೆ ಸದರಿ ಸಮಯದಲ್ಲಿ 20 ರಿಂದ 21 ವರ್ಷವಾಗಿರುತ್ತದೆ . ನನ್ನ ತಾಯಿ ಮದುವೆಯಾದ ವ್ಯಕ್ತಿಗೆ ಸದರಿ ಸಮಯದಲ್ಲಿ ಎಷ್ಟು ವರ್ಷ ವಯಸ್ಸಾಗಿತ್ತು ಎಂದು ನನಗೆ ತಿಳಿದಿಲ್ಲಾ. ನನ್ನ ತಾಯಿಯು ಮದುವೆಯಾಗುವ ಪೂರ್ವದಲ್ಲಿ ಅವರ ತವರುಮನೆಯ ಕುಟುಂಬದ ಸದಸ್ಯರಾಗಿ ಪಡಿತರ ಚೀಟಿ, ಮತದಾರರ ಚೀಟಿಯಲ್ಲಿ ಆಕೆಯ ಹೆಸರು ಇರುವ ಕುರಿತಾಗಿ ನನಗೆ ಯಾವುದೇ ಮಾಹಿತಿ ಇರುವುದಿಲ್ಲಾ . ಈ ದಾವೆಯನ್ನು ದಾಖಲಿಸಿದ ನಂತರದಲ್ಲಿ ಸದರಿ ದಾಖಲೆಗಳನ್ನು ಪಡೆದುಕೊಳ್ಳುವಂತಹ ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲಾ. ಮದುವೆಯಾದ ನಂತರದಲ್ಲಿ ನನ್ನ ತಾಯಿಯ ಹೆಸರು ಸದರಿ ದಾಖಾಲಾತಿಗಳಲ್ಲಿ ಕಡಿಮೆ ಆಗಿರುವ ಕುರಿತಾಗಿ ನನಗೆ ಯಾವುದೇ ಮಾಹಿತಿ ಇಲ್ಲ. ನನ್ನ ತಾಯಿಯ ಮದುವೆಯನ್ನು ಮುಂದೆ ನಿಂತು ಯಾರು ಮಾಡಿಸಿರುತ್ತಾರೆ ಎಂಬ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ತಾಯಿಯ ಮದುವೆಗೆ ಸಂಬಂಧಿಸಿದಂತೆ ಯಾರು ಪೂರೋಹಿತರು ಇದ್ದರೂ ಎಂಬ ಬಗ್ಗೆ ಕೂಡಾ ನನಗೆ ಮಾಹಿತಿ ಇರುವುದಿಲ್ಲ. ಸದರಿ ಮದುವೆಯಲ್ಲಿ ಸಪ್ತಪತಿಯಂತಹ ಶಾಸ್ತ್ರಗಳು ಆಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ . ನನ್ನ ತಾಯಿಯು ಮದುವೆಯಾಗಿ ಆಕೆಯ ಗಂಡನ ಜೊತೆ ಸಂಸಾರ ಮಾಡಿದ ಕುರಿತಾಗಿ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಹೊಸಬ್ಬಯ್ಯ ಎಂಬ ಹೆಸರಿನ ವ್ಯಕ್ತಿಗಳು ಸಾಮಾನ್ಯವಾಗಿ ಒಂದು ಊರಿನಲ್ಲಿ 4 ರಿಂದ 5 ಜನರು ಇರುತ್ತಾರೆ ಎಂದರೆ ಸರಿ. ಹೊಸಬ್ಬಯ್ಯ ಅಪ್ಪಯ್ಯ ನಾಯ್ಕ ಇವರಿಗೆ ಎಷ್ಟು ಜಮೀನು ಇದೆ ಎಂಬ ಬಗ್ಗೆ ನನಗೆ ದಾವಾ ದಾಖಲು ಮಾಡು ಸಮಯದಲ್ಲಿ ತಿಳಿದಿರುತ್ತದೆ. ದಾವಾ ಆಸ್ತಿಯ ಚತುರ್ಗಡಿಗಳಲ್ಲಿ ಯಾರು ಇದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಪ್ರಕಾರ ನನ್ನ ತಾಯಿಯು ತನ್ನ ಗಂಡನಿಂದ 1971-

**ಮೂ.ದಾ.ನಂ.** 94/2019

ಪಿ.ಡಬ್ಲ್ಯು.1

1972 ರಲ್ಲಿ ಪ್ರತ್ಯೇಕಳಾಗಿರುತ್ತಾಳೆ . ಹೊಸಬ್ಬಯ್ಯ ಅಪ್ಪಯ್ಯ ನಾಯ್ಕ ಇವರು ಗಂಗೆಯನ್ನು ಯಾವ ವರ್ಷದಲ್ಲಿ ಮದುವೆಯಾಗಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲಾ. ಸದರಿ ಗಂಗೆಯು ಅವರ ಮದುವೆಯಾದ ದಿನಾಂಕದಿಂದ ಹೊಸಬ್ಬಯ್ಯ ಅಪ್ಪಯ್ಯ ನಾಯ್ಕ ಇವರು ಮರಣ ಹೊಂದುವವರೆಗೂ ಅವರ ಜೊತೆಗೆ ಇದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ಹೊಸಬ್ಬಯ್ಯ ಹಾಗೂ ಗಂಗೆ ಇವರ ದಾಂಪತ್ಯದಿಂದ ಬಾಬು ಹಾಗೂ ವಿಮಲಾ ಜನಿಸಿರುತ್ತಾರೆ ಎಂದರೆ ಸಾಕ್ಷಿಯು ಈ ಬಗ್ಗೆ ನನಗೆ ತಿಳಿದಿಲ್ಲಾ ಎಂದು ನುಡಿಯುತ್ತಾರೆ. ನನ್ನ ತಾಯಿಯ ಜೀವಿತ ಅವಧಿಯಲ್ಲಿ ತನ್ನ ಗಂಡನೊಂದಿಗೆ ಪುನಃ ವಾಪಾಸ್ಸು ಹೋಗುವ ಕುರಿತಾಗಿ ಯಾವುದೇ ಮಾತುಕತೆ ಆಗಿರುವ ಬಗ್ಗೆ ನನಗೆ ತಿಳಿದಿಲ್ಲಾ. ನನ್ನ ತಾಯಿಯು ಅವರ ಜೀವಿತ ಅವಧಿಯಲ್ಲಿ ಜೀವನಾಂಶ ಕೋರಿ ಆಕೆಯ ಗಂಡನ ವಿರುದ್ಧ ಯಾವುದೇ ಪ್ರಕರಣವನ್ನು ದಾಖಲಿಸಿರುವುದಿಲ್ಲ. ಹೊಸಬ್ಬಯ್ಯ ಅಪ್ಪಯ್ಯ ನಾಯ್ಕ ಇವರು ಯಾವಾಗ ಮರಣ ಹೊಂದಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ದಾವಾ ಆಸ್ತಿಗಳು 20-05-1990 ರಲ್ಲಿ ವಾಂಟಣಿಯಾಗಿರುತ್ತದೆ ಎಂದರೆ ಸರಿ . ನಾನು ಸದರಿ ವಾಂಟಣಿಯ ಬಗ್ಗೆ ದಾಖಾಲಾತಿಯನ್ನು ನೋಡಿ ತಿಳಿದುಕೊಂಡಿರುತ್ತೇನೆ . ದಾವಾ ಆಸ್ತಿಗಳನ್ನು ಯಾರು ಯಾರು ಸಾಗುವಳಿ ಮಾಡುತ್ತಿದ್ದರು ಎಂಬ ಬಗ್ಗೆ ದಾವಾ ದಾಖಲಾಗುವವರೆಗೂ ನನಗೆ ತಿಳಿದಿಲ್ಲ. ನಾನು ನೋಡಿದ ದಾಖಲೆಯ ಪ್ರಕಾರ ಹೊಸಬ್ಬಯ್ಯ ಅಪ್ಪಯ್ಯ ನಾಯ್ಕ ಹಾಗೂ ಸುಬ್ಬಯ್ಯ ಅಪ್ಪಯ್ಯ ನಾಯ್ಕ ರವರು ಸಹೋದರರು ಎಂದರೆ ಸರಿ. ದಾವಾ ಆಸ್ತಿಗಳನ್ನು ಭೂನ್ಯಾಯಮಂಡಳಿಯಿಂದ ಮಂಜೂರು ಮಾಡಿಕೊಳ್ಳುವ ಸಲುವಾಗಿ ಇಬ್ಬರೂ ಕೂಡಾ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ .

ಸುಬ್ಬಯ್ಯ ಅಪ್ಪಯ್ಯ ನಾಯ್ಕ ಇವರಿಗೆ ಜನಾರ್ಧನ ಸುಬ್ಬಯ್ಯ ನಾಯ್ಕ ಒಬ್ಬನೇ ಮಗ ಎಂದರೆ ಸರಿ. ಮೃತ ಹೊಸಬ್ಬಯ್ಯ ಅಪ್ಪಯ್ಯ ನಾಯ್ಕ ಹಾಗೂ 1 ರಿಂದ 4 ನೇ ಪ್ರತಿವಾದಿಯರು ಸೇರಿ 1990 ರಲ್ಲಿ ವಾಂಟಣಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ಸದರಿ ದಾಖಲಾತಿಯಲ್ಲಿ ಹೊಸಬ್ಬಯ್ಯ ಅಪ್ಪಯ್ಯ ನಾಯ್ಕ ಇವರು 1 ರಿಂದ 3 ನೇ ಪ್ರತಿವಾದಿಯರನ್ನು ತನ್ನ ಹೆಂಡತಿ ಹಾಗೂ ಮಕ್ಕಳು ಎಂದು ಮತ್ತು 4 ನೇ ಪ್ರತಿವಾದಿಯನ್ನು ತನ್ನ ಸಹೋದರನ ಮಗ ಎಂದು ತೋರಿಸಿರುತ್ತಾರೆ ಎಂದರೆ ಸರಿ.

**ಮೂ.ದಾ.ನಂ.** 94/2019

**ಪಿ.ಡಬ್ಲ್ಯು.1**

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ